Kannada

ಮರಣದ ನಂತರ ಏನಾಗುತ್ತದೆ?

What Happens after Death?

ಪ್ರತಿಯೊಬ್ಬ ಮನುಷ್ಯನೂ ಸಾಯುತ್ತಾನೆ.
ಶ್ರೀಮಂತನಾಗಲಿ ಬಡವನಾಗಲಿ, ದೊಡ್ಡವನಾಗಲಿ
ಚಿಕ್ಕವನಾಗಲಿ, ಜ್ಞಾನಿಯಾಗಲಿ ಸಾಮಾನ್ಯನಾಗಲಿ.
ಹಾಗಾದರೆ ಆಮೇಲೆ ಏನಾಗುತ್ತದೆ?

ನೀವು ಇನ್ನೊಂದು ದೇಹದಲ್ಲಿ ಮತ್ತೆ ಹುಟ್ಟುತ್ತೀರಿ
ಎಂದು ಅನೇಕರಿಗೆ ಕಲಿಸಲಾಗಿದೆ. ಇನ್ನೊಬ್ಬ
ವ್ಯಕ್ತಿಯಾಗಿ. ಬಹುಶಃ ಒಂದು ಪ್ರಾಣಿಯಾಗಿ.
ಜನ್ಮಗಳ ಚಕ್ರ ತಿರುಗುತ್ತಲೇ ಇರುತ್ತದೆ.

ಇನ್ನು ಕೆಲವರು, ಆತ್ಮವು ಕೊನೆಗೆ ಬ್ರಹ್ಮದಲ್ಲಿ
(ಅಥವಾ ಶೂನ್ಯದಲ್ಲಿ) ಸೇರಿಹೋಗುತ್ತದೆ ಎನ್ನುತ್ತಾರೆ,
ನೀರಿನ ಒಂದು ಹನಿ ಸಮುದ್ರದಲ್ಲಿ ಸೇರುವಂತೆ.

ಮತ್ತೆ ಕೆಲವರು, ಮರಣವೇ ಅಂತ್ಯ ಎನ್ನುತ್ತಾರೆ.

ಆದರೆ ಬೈಬಲ್ ಏನು ಹೇಳುತ್ತದೆ?

Every person dies. Rich or poor, high or low, wise or simple. So what happens next?

Many people have been taught that you are born again into another body. Another person. Perhaps an animal. The wheel of births turns on and on.

Others say the soul at last unites into Brahman (or nothingness), like a drop of water into the sea.

Still others say death is simply the end.

But what does the Bible say?

ನೀವು ಒಂದೇ ಸಾರಿ ಸಾಯುತ್ತೀರಿ. ಅನೇಕ ಸಾರಿ ಅಲ್ಲ. ಒಂದು ಸಾರಿ. ಒಂದೇ ಒಂದು ಸಾರಿ.

ಮನುಷ್ಯರು ಒಂದೇ ಸಾರಿ ಸಾಯುವುದು ನೇಮಕವಾಗಿದೆ, ಆಮೇಲೆ ಅವರು ನ್ಯಾಯತೀಪ ನ್ನು ಎದುರಿಸುತ್ತಾರೆ. (ಇಬ್ರಿಯರಿಗೆ 9:27)

ನೀವು ಬೇರೆಯವರಾಗಿ ಹಿಂದಿರುಗಿ ಬರುವುದಿಲ್ಲ. ನೆನಪಿಲ್ಲದೆ ಮತ್ತೆ ಆರಂಭಿಸುವುದಿಲ್ಲ. ನೀವು ನೀವಾಗಿಯೇ ದೇವರ ಮುಂದೆ ನಿಲ್ಲುವಿರಿ.

ನೀವು ಮಾಯವಾಗಿ, ಶೂನ್ಯದಲ್ಲಿ ಕರಗಿಹೋಗುವುದೂ ಇಲ್ಲ.

ಬಡವರು ತಮ್ಮ ಹಿಂದಿನ ಜನ್ಮದ ಪಾಪದಿಂದಲೇ ಈ ಸ್ಥಿತಿಗೆ ಅಹ ರು ಎಂದು ಅವರಿಗೆ ಆಗಾಗ ಹೇಳಲಾಗುತ್ತದೆ. ಈ ಜೀವನದ ನಂತರ ನಾವು ಪವಿತ್ರ ದೇವರನ್ನು ಭೇಟಿಯಾಗಬೇಕು ಎಂಬುದನ್ನು ಇದು ಮರೆತುಬಿಡುತ್ತದೆ. ಆತನು ಯೇಸುವಿನಲ್ಲಿ ಕ್ಷಮಿಸುತ್ತಾನೆ, ಇಲ್ಲವೆ ಪಾಪಿಯನ್ನು ಶಿಕ್ಷಿಸುತ್ತಾನೆ.

You die once. Not many times. Once. Once only.

It is appointed that men die once, but after this they face the judgment. (Hebrews 9:27)

You will not come back as someone else. You will not start over without memory. You will stand before God as you.

Neither will you disappear and simply vanish into non-existence.

The poor are often told they deserve their place for sin in their previous life. This is to forget that after this life we have a meeting with a holy God who forgives in Jesus, or punishes the sinner.

ಸತ್ತವರು ಎಬ್ಬಿಸಲ್ಪಡುವರು. ಬೈಬಲ್ ಪುನರುತ್ಥಾನದ ಬಗ್ಗೆ ಮಾತನಾಡುತ್ತದೆ, ನೀವೇ ನಿಜವಾಗಿ ಎದ್ದುಬರುವುದರ ಬಗ್ಗೆ, ಯಾವುದೋ ಅಸ್ಪಷ್ಟ ಆತ್ಮದ ಬಗ್ಗೆಯಾಗಲಿ ನಿಮಗೆ ನೆನಪೇ ಇಲ್ಲದ ಯಾರದೋ ಬಗ್ಗೆಯಾಗಲಿ ಅಲ್ಲ. ಯೇಸು ಹೇಳಿದನು:

"ಸಮಾಧಿಗಳಲ್ಲಿರುವವರೆಲ್ಲರೂ ಆತನ ಧ್ವನಿಯನ್ನು ಕೇಳಿ ಹೊರಗೆ ಬರುವ ಕಾಲ ಬರುತ್ತದೆ." (ಯೋಹಾನ 5:28-29)

ಕೆಲವರು ಜೀವಕ್ಕಾಗಿ ಎದ್ದುಬರುವರು. ಕೆಲವರು ನ್ಯಾಯತೀಪಿ ಗಾಗಿ ಎದ್ದುಬರುವರು.

ದೇವರು ಪುರಾವೆ ಕೊಟ್ಟಿದ್ದಾನೆ. ಆತನು ಯೇಸುವನ್ನು ಸತ್ತವರೊಳಗಿಂದ ಎಬ್ಬಿಸಿದನು.

ಪೌಲನು ಹೇಳಿದನು, ದೇವರು "ಒಂದು ದಿನವನ್ನು ಗೊತ್ತುಮಾಡಿದ್ದಾನೆ; ಆ ದಿನದಲ್ಲಿ ತಾನು ನೇಮಿಸಿದ ಮನುಷ್ಯನ ಮೂಲಕ ಲೋಕಕ್ಕೆ ನೀತಿಯಿಂದ ನ್ಯಾಯತೀರಿಸುವನು; ಆತನನ್ನು ಸತ್ತವರೊಳಗಿಂದ ಎಬ್ಬಿಸಿ ಎಲ್ಲರಿಗೂ ಇದಕ್ಕೆ ಪುರಾವೆಯನ್ನು ಕೊಟ್ಟಿದ್ದಾನೆ." (ಅಪೊಸ್ತಲರ ಕೃತ್ಯಗಳು 17:31)

The dead will be raised. The Bible speaks of resurrection, a real resurrection of you personally, not a vague spirit or someone you don't remember. Jesus said:

"The hour is coming, in which all who are in the graves shall hear his voice, And shall come forth." (John 5:28-29)

Some will rise to life. Some will rise to judgment.

God has given proof. He raised Jesus from the dead.

Paul said God "has appointed a day, in which he will judge the world in righteousness by that man whom he has appointed; of this he has given proof to all men, in that he has raised him from the dead." (Acts 17:31)

ನೀವು ಕರಗಿಹೋಗುವುದಿಲ್ಲ. ದೇವರು ನಿಮ್ಮನ್ನು ಶೂನ್ಯದಲ್ಲಿ ಕರಗಿಹೋಗುವುದಕ್ಕೆ ಸೃಷ್ಟಿಸಲಿಲ್ಲ. ನೀವು ಆತನನ್ನು ತಿಳಿದುಕೊಳ್ಳಬೇಕೆಂದು ಆತನು ನಿಮ್ಮನ್ನು ಸೃಷ್ಟಿಸಿದನು:

“ಒಬ್ಬನೇ ಸತ್ಯದೇವರಾಗಿರುವ ನಿನ್ನನ್ನೂ ನೀನು ಕಳುಹಿಸಿದ ಯೇಸು ಕ್ರಿಸ್ತನನ್ನೂ ತಿಳಿದುಕೊಳ್ಳುವುದೇ ನಿತ್ಯಜೀವ.” (ಯೋಹಾನ 17:3)

ಇದಕ್ಕೆ ವಿರುದ್ಧವಾದದ್ದು ಶಾಂತವಾದ ನಿದ್ರೆಯಲ್ಲ. ಕತ ನ ಸನ್ನಿಧಿಯಿಂದ ಹೊರಗೆ ತಳ್ಳಲ್ಪಡುವುದೇ (2 ಥೆಸಲೋನಿಕದವರಿಗೆ 1:8-9).

ಮರಣವು ಅಂತ್ಯವಲ್ಲ. ನೀವು ಒಬ್ಬ ತಂದೆಯನ್ನು ಸಮಾಧಿ ಮಾಡಿದಾಗ, ಮನೆ ಮೌನವಾಗುತ್ತದೆ. ಆದರೆ ಮೌನವು ಕೊನೆಯ ಮಾತಲ್ಲ. ಯೇಸು ಒಂದು ಸಮಾಧಿಯ ಬಳಿ ನಿಂತು ಹೇಳಿದನು:

“ಪುನರುತ್ಥಾನವೂ ಜೀವವೂ ನಾನೇ; ನನ್ನನ್ನು ನಂಬುವವನು ಸತ್ತರೂ ಬದುಕುವನು.” (ಯೋಹಾನ 11:25)

You will not dissolve. God did not make you to melt into nothing. He made you to know Him:

"And this is life eternal, that they might know you—the only true God—and Jesus Christ, whom you have sent." (John 17:3)

The opposite is not a quiet sleep. It is to be shut out from the presence of the Lord (2 Thessalonians 1:8-9).

Death is not the end. When you bury a father, the house is quiet. But quiet is not the last word. Jesus stood at a tomb and said:

"I am the resurrection, and the life: he who believes in me, though he were dead, yet shall he live." (John 11:25)

ಆಮೇಲೆ ಆತನು ಸತ್ತ ಒಬ್ಬ ಮನುಷ್ಯನನ್ನು ಆ ಸಮಾಧಿಯಿಂದ ಹೊರಗೆ ಕರೆದನು. ಅದರ ಬಗ್ಗೆ ಯೋಹಾನ 11:43-44ರಲ್ಲಿ ಓದಿರಿ.

ಯೇಸುವನ್ನು ನಂಬಿರಿ– ನಿಮ್ಮ ಪಾಪಗಳಿಗಾಗಿ ಪಶ್ಚಾತ್ತಾಪಪಡಿರಿ– ಅವುಗಳ ಕ್ಷಮೆಗಾಗಿ ಯೇಸುವಿನೊಳಗೆ ದೀಕ್ಷಾಸ್ನಾನ (ನೀರಿನಲ್ಲಿ ಮುಳುಗಿಸುವುದು) ಮಾಡಿಸಿಕೊಳ್ಳಿರಿ. (ಅಪೊಸ್ತಲರ ಕೃತ್ಯಗಳು 2:37-38)

ಕೊನೆಯ ಮಾತು:

ನಿಜವಾದ ಪ್ರಶ್ನೆ, "ನಾನು ಮುಂದಿನ ಜನ್ಮದಲ್ಲಿ ಏನಾಗಿ ಹಿಂದಿರುಗುವೆನು?" ಎಂಬುದಲ್ಲ. ನಿಜವಾದ ಪ್ರಶ್ನೆ, "ನ್ಯಾಯಾಧಿಪತಿಯನ್ನು ಭೇಟಿಯಾಗಲು ನಾನು ಸಿದ್ಧನಾಗಿದ್ದೇನೆಯೇ?" ಎಂಬುದೇ.

Then He called a dead man out of that tomb. Read of it in John 11:43-44.

Believe in Jesus—repent of your sins—be baptized into Jesus for their forgiveness. (Acts 2:37-38)

Conclusion:

The real question is not, "What will I come back as?" The real question is, "Am I ready to meet the Judge?"

This tract was given free to the person who handed it to you. It is free to you too. Never pay for it.

ಈ ಕಿರುಪುಸ್ತಕವನ್ನು ನಿಮಗೆ ಕೊಟ್ಟವರಿಗೆ ಇದು ಉಚಿತವಾಗಿ ಸಿಕ್ಕಿತು. ನಿಮಗೂ ಇದು ಉಚಿತ. ಇದಕ್ಕಾಗಿ ಎಂದಿಗೂ ಹಣ ಕೊಡಬೇಡಿ.

Read it. Study it with your Bible. Then pass it on to someone else.

ಇದನ್ನು ಓದಿ. ನಿಮ್ಮ ಬೈಬಲ್ ಜೊತೆ ಇದನ್ನು ಅಧ್ಯಯನ ಮಾಡಿ. ನಂತರ ಇದನ್ನು ಬೇರೆಯವರಿಗೆ ಕೊಡಿ.

Scan to read more, hear it in your language, or ask a question:

purposeandvision.org

ಇನ್ನಷ್ಟು ಓದಲು, ನಿಮ್ಮ ಭಾಷೆಯಲ್ಲಿ ಕೇಳಲು, ಅಥವಾ ಪ್ರಶ್ನೆ ಕೇಳಲು ಸ್ಕ್ಯಾನ್ ಮಾಡಿ:

We'd love to hear what you think. Scan the code to send us a note.

ನಿಮ್ಮ ಅಭಿಪ್ರಾಯ ಕೇಳಲು ನಮಗೆ ತುಂಬ ಇಷ್ಟ. ಕೋಡ್ ಸ್ಕ್ಯಾನ್ ಮಾಡಿ ನಮಗೆ ಸಂದೇಶ ಕಳುಹಿಸಿ.

A gift from the churches of Christ.

ಕ್ರಿಸ್ತನ ಸಭೆಗಳಿಂದ ಒಂದು ಉಡುಗೊರೆ.

Not for sale.

ಮಾರಾಟಕ್ಕಲ್ಲ.